**ಮೂಲ ದಾವಾ ನಂಃ 4/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 05-08-2025 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಎನ್ ಜೆ ರವರಿಂದಃ</u>**

ನಿಮ್ಮ ಮದುವೆ ಪ್ರಭಾಕರರವರೊಂದಿಗೆ ಯಾವಾಗ ಆಯಿತು ಎಂದರೆ ಸಾಕ್ಷಿ ದಿನಾಂಕ 26-12-2010 ರಂದು ಆಯಿತು ಅಂತಾ ಉತ್ತರಿಸುತ್ತಾರೆ. ನೀವು ಅವರನ್ನು ಮದುವೆಯಾದ ನಂತರ ಅವರಿಗೆ ಎಷ್ಟು ಆಸ್ತಿ ಇದೆ , ಎಷ್ಟು ಸಾಲ ಇದೆ ಎಂಬುದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಆ ಸಮಯದಲ್ಲಿ ಅವರಿಗೆ ಏನೆಲ್ಲಾ ಆಸ್ತಿ ಇತ್ತು ಎಂದರೆ ಸಾಕ್ಷಿ ಅವರಿಗೆ ಚಿತ್ತಾಕುಲದಲ್ಲಿ ನಾಲ್ಕು ಫ್ಯಾಕ್ಟರಿ ಇದ್ದು, ಗಣೇಶ ವುಡ್ ಇಂಡಸ್ಟ್ರೀಸ್, ಗಿರಿ ಫಿಶ್ ಕ್ಯಾನಿಂಗ್, ಗಣೇಶ್ ಫರ್ನಿಚರ್, ಐಸ್ ಫ್ಯಾಕ್ಟರಿ ಇತ್ತು ಅಂತಾ ಉತ್ತರಿಸುತ್ತಾರೆ. ಆ ಎಲ್ಲಾ ಆಸ್ತಿಗಳನ್ನು ಅವರ ಮೊದಲನೆಯ ಹೆಂಡತಿ ಜೀವಂತ ಇರುವಾಗಲೇ ಮಾಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಿಮ್ಮ ಗಂಡ ಪ್ರಭಾಕರರವರ ಮೊದಲನೆಯ ಹೆಂಡತಿ ಕೂಡಾ ಸದ್ರಿ ವ್ಯವಹಾರಗಳಲ್ಲಿ ಭಾಗಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಎಲ್ಲಾ ಆಸ್ತಿಗಳ ಬಾಬ್ತು ಎಷ್ಟು ಸಾಲ ಇತ್ತು ಎಂದರೆ ಸಾಕ್ಷಿ ಸ್ವಲ್ಪ ಸಾಲ ಇದೆ ಅಂತಾ ಕೇಳಿದ್ದೆ ಅಂತಾ ಉತ್ತರಿಸುತ್ತಾರೆ. ಸ್ವಲ್ಪ ಸಾಲ ಎಂದರೆ ಎಷ್ಟು ಎಂದರೆ ಸಾಕ್ಷಿ ರೂ.25 ರಿಂದ 35 ಲಕ್ಷದವರೆಗೆ ಇರಬಹುದು ಅಂತಾ ಉತ್ತರಿಸುತ್ತಾರೆ. ಸದ್ರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಎಷ್ಟು ಸಾಲ ಇತ್ತು ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ ಎಂದರೆ ಸಾಕ್ಷಿ ಅವರು ಬಾಯಿ ಮಾತಿನಲ್ಲಿ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಪ್ರಭಾಕರರವರಿಗೆ ಶಾಂತಿಕಾ ಸೌಹಾರ್ದ ಸೊಸೈಟಿಯಲ್ಲಿ ಸಾಲ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಿನಾಯಕ ಫರ್ನಿಚರ್ ಎಂಬ ಉದ್ಯಮಕ್ಕೆ ಅಸ್ನಾಮಿನ ಒಂದು ಸಂಸ್ಥೆಯಿಂದ ರೂ. 7,27,000/- ಸಾಲ ಇತ್ತು ಎಂದರೆ ಸುಳ್ಳು. ಸದ್ರಿ ಶಾಂತಿಕಾ ಸೊಸೈಟಿಯಿಂದ ಬೇರೆ ಬೇರೆ ಕಾರಣಕ್ಕಾಗಿ ಸುಮಾರು ರೂ. 45,00,000/- ಸಾಲ ಮಾಡಿಕೊಂಡಿದ್ದರು ಎಂದರೆ ಸುಳ್ಳು . ಅದೇ ರೀತಿ ಶಿರಸಿ ಅರ್ಬನ್ ಬ್ಯಾಂಕ್ ನಿಂದ ರೂ.29,00,000/- ಸಾಲ ಪಡೆದಿದ್ದರು ಎಂದರೆ ಸುಳ್ಳು. ಕ್ಯಾನಿಂಗ್ ಫ್ಯಾಕ್ಟರಿ ಸಲುವಾಗಿ ರೂ .50,00,000/- ಸಾಲ ಇತ್ತು ಎಂದರೆ ಸುಳ್ಳು. ಪ್ರಭಾಕರರವರ ಬಾಬ್ತು ಇರುವ ವಾಹನಗಳೆಲ್ಲವೂ ಅವರು ಜೀವಂತ ಇರುವಾಗಲೇ ಗುಜರಿ ಆಗಿತ್ತು ಎಂದರೆ ಸುಳ್ಳು. ಗಿರೀಶ್ ಫಿಶ್ ಇಂಡಸ್ಟ್ರೀ ಸಹ ನಿಲುಗಡೆ ಆಗಿತ್ತು ಎಂದರೆ ಸುಳ್ಳು. ಗಣೇಶ್ ಫರ್ನೀಚರ್ ಎಂಬ ಸಂಸ್ಥೆ ಸಹ ಮುಚ್ಚಲಾಗಿತ್ತು ಎಂದರೆ ಸುಳ್ಳು. ಈ ಎಲ್ಲಾ ಕೈಗಾರಿಕೆಗಳಿಗೆ ಪ್ರಭಾಕರವರು ಸರಕಾರದಿಂದ ರೂ. 25 ಲಕ್ಷ

**ಮೂಲ ದಾವಾ ನಂಃ 4/2025**

**ಪಿ. ಡಬ್ಲ್ಯು 1**

ಸಬ್ಸಿಡಿ ಪಡೆದಿದ್ದರು ಎಂದರೆ ಸಾಕ್ಷಿ 1 ನೇ ಪ್ರತಿವಾದಿಗೆ ಕೇಳಿದಾಗ ಬಂದಿರುವ ಸಬ್ಸಿಡಿ ಹಣದಲ್ಲಿ ಸಾಲವನ್ನು ಚುಕ್ತಾ ಮಾಡಿರುವುದಾಗಿ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಆ ಎಲ್ಲಾ ಸಾಲಗಳನ್ನು ಚುಕ್ತಾ ಮಾಡಿರುವುದಿಲ್ಲ ಹಾಗೂ ಸರಕಾರದಿಂದ ಬಂದ ಸಬ್ಸಿಡಿಯನ್ನು ವಾಪಾಸು ಕೇಳಿದ್ದಾರೆ ಎಂದರೆ ಸುಳ್ಳು. ಸದ್ರಿ ಉದ್ಯಮಗಳಿಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆ ಇಲಾಖೆಗೆ ರೂ.21,50,000/-ತೆರಿಗೆ ಕೊಡಬೇಕಾಗಿತ್ತು ಎಂದರೆ ಸುಳ್ಳು. ಪ್ರಭಾಕರರವರ ಮೊದಲನೆಯ ಹೆಂಡತಿ ಆ ಎಲ್ಲಾ ವ್ಯವಹಾರಗಳಲ್ಲಿ ಭಾಗಿಯಾಗಿ ಆದಾಯ ತೆರಿಗೆ ಸಹ ಪಾವತಿ ಮಾಡುತ್ತಿದ್ದರು ಎಂದರೆ ಸುಳ್ಳು. ಆ ಎಲ್ಲಾ ವ್ಯವಹಾರಗಳು ಮುಚ್ಚಿ ಹೋಗಿರುವುದರಿಂದ ಈಗ ಸುಮಾರು ಎರಡು ಕೋಟಿ ಸಾಲ ಆಗಿದ್ದು ಅದನ್ನು ಪ್ರತಿವಾದಿಗಳು ತುಂಬಬೇಕಾಗಿರುತ್ತದೆ ಎಂದರೆ ಸುಳ್ಳು.

2. ನಿಮಗೆ ಸೀ ಬರ್ಡ್ ನಿಂದ ರೂ. 1,50,000/- ಪರಿಹಾರದ ಹಣ ಬಂದಿರುತ್ತದೆ ಎಂದರೆ ಸರಿ. ಆ ಪರಿಹಾರದ ಹಣದಲ್ಲಿ ನೀವು ಯಾವುದೇ ಸಾಲವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕಳೆದ 10 ವರ್ಷಗಳಿಂದ ನನ್ನ ಬಳಿ ಹಣ ಇಲ್ಲದೇ ಇರುವುದರಿಂದ ಸಾಲ ಮರುಪಾವತಿ ಮಾಡುವ ಅವಕಾಶ ಇರುವುದಿಲ್ಲ ಅಂತಾ ಉತ್ತರಿಸುತ್ತಾರೆ. ಯಾವುದಾದರೂ ಆಸ್ತಿ ಇದ್ದರೆ ಅದರಲ್ಲಿ ಪ್ರತಿವಾದಿಗಳಿಗೂ ಸಹ ಅರ್ಧ ಹಕ್ಕು ಇದೆ ಎಂದರೆ ಸಾಕ್ಷಿ ಏನೇ ಇದ್ದರೂ 3 ಪಾಲು ಆಗಬೇಕು ಅಂತಾ ಉತ್ತರಿಸುತ್ತಾರೆ.

3. ಈ ಹಿಂದೆ ಒಂದು ದಾವೆ ಮಾಡಿ ವಾಪಾಸು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನಿಮ್ಮ ದಾವೆ ವಜಾ ಆಗಲು ಯೋಗ್ಯ ಇದೆ ಎಂದರೆ ಸುಳ್ಳು. ಪ್ರಭಾಕರರವರ ಆಸ್ತಿಗಿಂತ ಸಾಲವೇ ಹೆಚ್ಚಿದೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**